ಬೆಳಗ್ಗೆ ಗಂಡನ ಮನವೊಲಿಸಿ ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾದಳು.

'ಚಿದಂಬರ ಈಗೀಗ ಮೂಗರಳಿಸಿ ಎದುರು ಸಿಕ್ಕಿದವರದೆಲ್ಲಾ ವಾಸನೆ ನೋಡುತಿದ್ದಿಯಲ್ಲ. ಯಾವ ರೋಗ ಬಡಿದಿದೆ ಕಣಯ್ಯ ನಿನಗೆ. ನನ್ನ ಪರಿಚಯದ ಮನೋವೈದ್ಯರೊಬ್ಬರಿದ್ದಾರ, ಅವರಿಗಿ ಹೇಳತೀನಿ ಒಂದಿಷ್ಟು ಟೆಸ್ಟ್ ಆದರೂ ಮಾಡಿಸಿಕೊ' ಎಂದು ಶೇಷಗಿರಿ ಪುರೋಹಿತ ವೈದ್ಯರ ವಿಳಾಸ ಕೊಟ್ಟು ಅವನನ್ನು ಸಾಗಹಾಕಿದ್ದ. ಚಿದಂಬರನನ್ನು ವಿವರವಾಗಿ ಪರೀಕ್ಷಿಸಿದ ವೈದ್ಯರು ಅವನ ಈ ಆಘ್ರಾಣಿಸಿ ನೋಡುವ ಚಟಕ್ಕೆ ಕಾರಣ ಹುಡುಕಲು ವಿಫಲರಾದರು. ಒಮ್ಮೆ ದೀರ್ಘವಾಗಿ ಉಸಿರೆಳೆದುಕೊಂಡು ಆಘ್ರಾಣಿಸಿ ತನಗನಿಸಿದ್ದನ್ನು ವಿವರಿಸುವಂತೆ ಚಿದಂಬರನಿಗೆ ಸೂಚಿಸಿದರು. ಮೂಗು ಅರಳಿಸಿ ಆಘ್ರಾಣಿಸಿದವನಿಗೆ ತನ್ನನ್ನು ಪರೀಕ್ಷಿಸಿದ ವೈದ್ಯರೇ ಹತ್ತಾರು ನಮೂನೆಯ ಮಾನಸಿಕ ಕಾಯಿಲೆಗಳಿಂದ ಬಳಲುತ್ತಿರುವುದು ಅರಿವಾಗಿ ಗಾಬರಿಯಾದ. ಎಷ್ಟು ಬಲವಂತ ಪಡಿಸಿದರೂ ಮೌನವಹಿಸಿದ. ಅವನ ಈ ಸಮಸ್ಯೆ ವೈದ್ಯರಿಗೆ ಚಿದಂಬರ ರಹಸ್ಯವಾಗಿಯೆ ಉಳಿಯಿತು.

* * *

ಅಂದು ಚಿದಂಬರ ಗಂಟೆ ಆರಾದರೂ ಕಚೇರಿಯಲ್ಲಿ ಫೈಲ್‌ಗಳನ್ನು ಪರಿಶೀಲಿಸುವುದರಲ್ಲೇ ಮಗ್ನನಾಗಿದ್ದ. ಆಫೀಸಿನ ಸಿಬ್ಬಂದಿ ಒಬ್ಬೊಬ್ಬರಾಗಿ ತಮ್ಮ ಟೇಬಲ್ ಮೇಲಿನ ಕಡತಗಳನ್ನು ಮುಚ್ಚಿಟ್ಟು ಹೊರಟು ಹೋದರು. ಅಟೆಂಡರ್ ರಂಗಪ್ಪ ತನಗೆ ಮನೆಯಲ್ಲಿ ತುರ್ತು ಕೆಲಸವಿದೆಯೆಂದು ಬೀಗದ ಕೈಯನ್ನು ಚಿದಂಬರನ ಟೇಬಲ್ ಮೇಲಿಟ್ಟು ನಾಳೆ ಮನೆಗೆ ಬಂದು ಪಡೆಯುವುದಾಗಿ ಹೇಳಿ ಹೋದ. ಇಡೀ ಆಫೀಸಿನಲ್ಲಿ ಚಿದಂಬರ ಮತ್ತು ಹೆಡ್‌ಕ್ಲರ್ಕ್ ಪರಿಮಳ ಹೊರತುಪಡಿಸಿ ಬೇರೆಯಾವ ನರಪಿಳ್ಳೆಯೂ ಇರಲಿಲ್ಲ. 'ಏನು ರಾಯರು ಹೆಂಡತಿ-ಮಕ್ಕಳು ಊರಿಗಿ ಹೋಗಿದ್ದಾರಂತ ಆಫೀಸಿನಲ್ಲೇ ಠಿಕಾಣಿ ಹೂಡಬೇಕು ಅಂತ ನಿರ್ಧರಿಸಿರೊ ಹಾಂಗಿದೆ' ಎಂದ ಪರಿಮಳಾಳ ಮಾತಿಗೆ ಚಿದಂಬರ ಏನನ್ನೂ ಪ್ರತಿಕ್ರಿಯಿಸದೆ ತನ್ನ ಕೆಲಸದಲ್ಲೇ ಮಗ್ನನಾದ. 'ಮನೀಗಿ ಹೋದಮ್ಯಾಲ ಒಬ್ಬರಿಗೆ ಬೋರ್ ಅನಿಸಿದರ ಫೋನ್ ಮಾಡಿ' ಎಂದು ತನ್ನ ಎಡಗಣ್ಣು ಮಿಟುಕಿಸಿ ಮಾದಕ ನಗೆ ಚೆಲ್ಲಿ ವಯ್ಯಾರದಿಂದ ನಡೆದು ಹೋದವಳಲ್ಲಿ ಹುಚ್ಚೆದ್ದು ಕುಣಿಯುತ್ತಿರುವ ದೇಹದ ಬಯಕೆಯನ್ನು ವಾಸನೆಯಿಂದ ಚಿದಂಬರ ಗ್ರಹಿಸಿದ. ಅವಳತ್ತ ದೃಷ್ಟಿ ಬೀರಿದವನಿಗೆ ಒಳಗೆ ಹೇಗೇಗೋ ಆಗಿ ಕೆಲಸದಲ್ಲಿ ಏಕಾಗ್ರತೆ ಇಲ್ಲದಂತಾಗಿ ಕಡತಗಳನ್ನು ಮುಚ್ಚಿಟ್ಟು ಆಫೀಸಿಗೆ ಬೀಗಹಾಕಿ ಬಸ್‌ಸ್ಟಾಪ್ ಕಡೆ ಹೆಜ್ಜೆ ಹಾಕಿದ.

ಬಸ್‌ನಲ್ಲಿ ಕುಳಿತವನಿಗೆ ಇದ್ದಕಿದ್ದಂತೆ ಈ ಹಿಂದೆ ಅನೇಕ ಸಲ ಅನುಭವಕ್ಕೆ ಬಂದಿದ್ದ ವಿಚಿತ್ರ ವಾಸನೆ ಮೂಗಿಗೆ ಅಡರಿಕೊಂಡಂತಾಯಿತು. ಅದು ಮನಸ್ಸಿನ ವಾಸನೆ ಎಂದು ತಕ್ಷಣವೇ ಗುರುತಿಸಿದ. ಮನದ ಕಾಮನೆ ಯಾರದಾಗಿರಬಹುದೆಂದು ಪರಿಚಿತರಿಗಾಗಿ ಉದ್ದಕ್ಕೂ ದೃಷ್ಟಿ ಹರಿಸಿದವನಿಗೆ ತುಂಬಿ ತುಳುಕುತ್ತಿದ್ದ ಬಸ್‌ನಲ್ಲಿ ಪತ್ತೆಹಚ್ಚುವುದು ಪ್ರಯಾಸವೆನಿಸಿತು. ಮನದ ಕಾಮನೆಯನ್ನು ವಾಸನೆಯಾಗಿ ಹರಿಬಿಟ್ಟವರನ್ನು ಮನದಲ್ಲೆ ಶಪಿಸಿದ. ತಾನು ಇಳಿಯಬೇಕಾದ ಸ್ಟಾಪಿನಲ್ಲಿ ಹೆಚ್ಚುಕಡಿಮೆ ಜನರನ್ನು ತಳ್ಳಿಕೊಂಡೆ ಚಿದಂಬರ ಕೆಳಗಿಳಿದ. ಬೀಗ ತೆರೆದು ಮನೆ ಒಳಗೆ ಕಾಲಿಟ್ಟವನು ತನ್ನ ಹಿಂದೆಯೇ ಒಳಹೊಕ್ಕ ವಾಸನೆಯನ್ನು ಆಘ್ರಾಣಿಸಿ ಬೆರಗಾದ. ಮನೆಯಲ್ಲಿ ತನ್ನೊಬ್ಬನನ್ನು ಬಿಟ್ಟು ಬೇರೆ ಯಾವ ಮನುಷ್ಯ ಪ್ರಾಣಿಯೂ ಇರಲಿಲ್ಲ. ಚಿದಂಬರ ಆತುರಾತುರವಾಗಿ ಬಾಗಿಲು ಕಿಟಕಿಗಳನ್ನು ಭದ್ರವಾಗಿ ಮುಚ್ಚಿದ. ಹಾಲ್‌ನ ಮಧ್ಯದಲ್ಲಿ ನಿಂತು ಮೂಗಿನ ಎರಡೂ ಹೊಳ್ಳೆಗಳನ್ನು ಅರಳಿಸಿ ದೀರ್ಘವಾಗಿ ಉಸಿರೆಳೆದುಕೊಂಡವನಿಗೆ ಆ ವಿಚಿತ್ರ ವಾಸನೆ ತನ್ನಿಂದಲೇ ಬರುತ್ತಿದೆ ಎಂದು ಅರಿವಾಗಿ ಕಂಗಾಲಾದ. ಪರಿಮಳಾಳಂತೆ ಇದು ಶರೀರ ಬಯಕೆಯ ವಾಸನೆ ಎಂದು ಗ್ರಹಿಸಿದವನಿಗೆ ಅಸಹ್ಯ ಭಾವನೆ ಮೂಡಿತು. ಪರಿಮಳಾ ಕಣ್ಣು ಮಿಟುಕಿಸಿದ್ದು, ಮಾದಕ ನಗೆ ನಕ್ಕಿದ್ದು ನೆನಪಾಗಿ ತಲ್ಲಣಿಸಿದ. ತನಗೆ ಅರಿವಿಲ್ಲದಂತೆ ಅವಳನ್ನು ಅನುಭವಿಸಬೇಕೆಂಬ ಬಯಕೆ ಮನಸ್ಸಿನಲ್ಲಿ ಗೂಡುಕಟ್ಟಿದ್ದು ಕಂಡು ದಿಗಿಲುಗೊಂಡ. ಆ ವಿಚಿತ್ರ ವಾಸನೆ ಇಡೀ ಮನೆಯನ್ನು ಆವರಿಸಿಕೊಂಡು ತಾನು ಆ ವಾಸನೆಯ ಸುಳಿಯಲ್ಲಿ ಸಿಲುಕಿ ಉಸಿರುಗಟ್ಟಿದ ಅನುಭವವಾಗಿ ಭಯಗೊಂಡ ಚಿದಂಬರ ಧಡಾರೆಂದು ಬಾಗಿಲು ತೆರೆದು ಅವಸರವಸರವಾಗಿ ಓಡಿ ರಸ್ತೆಗಿಳಿದವನು ಕಡುಕಪ್ಪು ಕಾಡಿಗೆಯಂತೆ ತನ್ನೆದುರು ಹರಡಿಕೊಂಡ ದಟ್ಟ ಕತ್ತಲೆಯಲ್ಲಿ ಕರಗಿಹೋದ. ●